
# ಡಿಜಿಟಲ್ ಲೈಬ್ರರಿ ಲೇಖಕರಿಗೆ ರಾಯಧನ

## ● ಪ್ರೊ. ರಾಜಾರೆಡ್ಡಿಯವರು ಬೆಂಗಳೂರಿನಲ್ಲಿ ಲಕ್ಷ ಕನ್ನಡ ಪುಸ್ತಕಗಳನ್ನು ಡಿಜಿಟಲ್ ಲೈಬ್ರರಿಗೆ ಸೇರಿಸಲಿರುವುದು ಸಂತಸದ ವಿಷಯ


ಡಾ.ಎಂ.ಎಸ್.ಶ್ರೀಧರ್

ಅತಿಥಿ

" ಓದುಗರ ಸಂಖ್ಯೆಯನ್ನು ಆಧರಿಸಿ ರಾಯಧನ ನೀಡುವುದು ಮೇಲ್ನೋಟಕ್ಕೆ ಸರಿಯಿದ್ದರೂ ಇದರಿಂದ ಆಗಬಹುದಾದ ಕೆಲವು ದುಷ್ಪರಿಣಾಮಗಳನ್ನು ಚರ್ಚಿಸಿ ನಿರ್ಧರಿಸುವುದು ಸೂಕ್ತ "

ಇತ್ತೀಚೆಗೆ ದಶಲಕ್ಷ ಪುಸ್ತಕಗಳನ್ನು ಡಿಜಿಟೈಸ್ ಮಾಡುವ ಯೋಜನೆಯ ರೂವಾರಿ ಕಾರ್ನಿಗಿ ಮೆಲನ್ ವಿಶ್ವವಿದ್ಯಾಲಯದ ಪ್ರೊ. ರಾಜಾರೆಡ್ಡಿಯವರು ಬೆಂಗಳೂರಿನಲ್ಲಿ ಒಂದು ಲಕ್ಷ ಕನ್ನಡ ಪುಸ್ತಕಗಳನ್ನು ಜಗತ್ತಿನ ದಶಲಕ್ಷ ಪುಸ್ತಕಗಳ ಡಿಜಿಟಲ್ ಲೈಬ್ರರಿಯಲ್ಲಿ (ಅಂದರೆ ಹತ್ತನೆ ಒಂದರಷ್ಟು ಕನ್ನಡ!) ಸೇರಿಸಲಿರುವುದು ಸಂತಸದ ಸುದ್ದಿ. ರಾಯಧನ ನಿರ್ಧಾರಕ್ಕೆ ಹಲವು ಸೂತ್ರಗಳಿವೆ.

ಬ್ರಿಟನ್‌ನಲ್ಲಿ ಯೋಜಿಸಿರುವಂತೆ ಡಿಜಿಟೈಸ್ ಮಾಡಿದ ಪುಸ್ತಕಗಳನ್ನು ಇಂಟರ್‌ನೆಟ್‌ನಲ್ಲಿ ಅಳವಡಿಸಿ ಓದುಗರು/ ಸಾರ್ವಜನಿಕರು ಮಾಡಿದ ಪ್ರತಿ ಕ್ಲಿಕ್ ಒಂದಕ್ಕೆ ಲೇಖಕರಿಗೆ 25 ಪೈಸೆ ರಾಯಧನ ನೀಡುವ ಈ ಸಲಹೆ ಆಕರ್ಷಕವಾಗಿದ್ದು ಲೇಖಕರಲ್ಲಿ ಉತ್ಸಾಹ ಮೂಡಿಸಿದೆ. ಇದಕ್ಕಾಗಿ ಸರ್ಕಾರದ ಬೊಕ್ಕಸದಿಂದ ಪ್ರತಿ ವರ್ಷ ಒಂದು ಕೋಟಿ ರೂಪಾಯಿ ತೆಗೆದಿರಿಸಬೇಕಾಗಿದೆ.

ಓದುಗರ ಸಂಖ್ಯೆಯನ್ನಾಧರಿಸಿ ರಾಯಧನ ನೀಡುವುದು ಮೇಲ್ನೋಟಕ್ಕೆ ಸರಿಯಿದ್ದರೂ ಇದರಿಂದಾಗಬಹುದಾದ ಕೆಲವು ದುಷ್ಪರಿಣಾಮ/ ದುರ್ಬಳಕೆಗಳನ್ನು ಚರ್ಚಿಸಿ ನಿರ್ಧರಿಸುವುದು ಸೂಕ್ತ.

ಡಿಜಿಟಲ್ ಪ್ರಕಟಣೆ ಮುದ್ರಿತ ಪುಸ್ತಕ ಪ್ರಕಟಣೆಯ ಉಪೋತ್ಪತ್ತಿಯಾಗಿ ಎಷ್ಟು ಇ-ಪ್ರತಿಗಳನ್ನು ಉತ್ಪಾದಿಸಿ ಮಾರಾಟ ಮಾಡಿದರೂ ಉತ್ಪಾದನೆ, ರವಾನೆ ಮತ್ತು ದಾಸ್ತಾನು ವೆಚ್ಚವಿರುವುದಿಲ್ಲ. ಇ-ಪುಸ್ತಕಗಳ ನಿವ್ವಳ ವರಮಾನದ ಅರ್ಧದಷ್ಟನ್ನು ಅಥವ ಮುಖಬೆಲೆಯ ಶೇ. 25ರಷ್ಟನ್ನು ಲೇಖಕರಿಗೆ ರಾಯಧನವಾಗಿ ನೀಡಿ ರಾಂಡಮ್ ಹೌಸ್ ಮುಂಚೂಣಿಯಲ್ಲಿದೆಯಾದರೂ ಅಮೆಜಾನ್ ಡಾಟ್ ಕಾಂನಂತಹ ಮಧ್ಯವರ್ತಿಗಳ ಶೇ. 65ರಷ್ಟು ಸೋಡಿ ಬೇಡಿಕೆಯಿಂದಾಗಿ ಜಾಗತಿಕವಾಗಿ ಇ-ಪುಸ್ತಕಗಳ ರಾಯಧನ ಕಡಿಮೆಯಾಗಲಿದೆ.

ಕುತೂಹಲಕರ ಅಂಶವೆಂದರೆ ಇಂಟರ್‌ನೆಟ್‌ನಲ್ಲಿ ಜಾಹಿರಾತಿನ ಪೈಪೋಟಿ ತೀವ್ರವಾಗಿ, ಶೋಧಯಂತ್ರಗಳು ಇಂಟರ್‌ನೆಟ್ ಜಾಹಿರಾತಿಗೆ ಶುಲ್ಕ ನಿರ್ಧರಿಸುವ ಸೂತ್ರ ಸತತ ಬದಲಾಗುತ್ತಿದೆ. ಒಂದು ಹಂತದಲ್ಲಿ ಜಾಹಿರಾತಿನ ಮೇಲೆ ಎಷ್ಟು ಗ್ರಾಹಕರು ಕ್ಲಿಕ್ಕಿಸಿದರು ಎಂಬುದನ್ನು ಪರಿಗಣಿಸಿ ಜಾಹಿರಾತಿನ ಶುಲ್ಕವನ್ನು ನಿರ್ಧರಿಸಲಾಗುತ್ತಿತ್ತು. ಆದರೆ ಉದ್ಯಮಿಗಳ ಪೈಪೋಟಿಯಿಂದಾಗಿ ಸ್ಪರ್ಧಿಗಳು ಬಾಡಿಗೆ ಕೆಲಸಗಾರರಿಂದ ಲಕ್ಷಾಂತರ ಬಾರಿ ಪ್ರತಿಸ್ಪರ್ಧಿಯ ಜಾಹಿರಾತಿನ ಮೇಲೆ ಕ್ಲಿಕ್ಕಿಸಿ ಜಾಹಿರಾತಿಗಾಗಿ ದುಬಾರಿ ಶುಲ್ಕ ತೆರುವಂತೆ ಮಾಡಿದ್ದರಿಂದ ಶುಲ್ಕ ನಿರ್ಧಾರಕ್ಕೆ ಇತರ ಸೂತ್ರಗಳ ಅಳವಡಿಕೆ ಅನಿವಾರ್ಯವಾಯಿತು. ಇದನ್ನು ಗಮನಿಸಿದರೆ ಡಿಜಿಟೈಸ್ ಮಾಡಿದ ಪುಸ್ತಕಗಳಿಗೆ ಓದುಗರ ಸಂಖ್ಯೆಯನ್ನಾಧರಿಸಿದ ರಾಯಧನ ನೀಡಿಕೆ ಹೇಗಿರುತ್ತದೆಂದು ಊಹಿಸಬಹುದು. ಜನಪ್ರಿಯವಲ್ಲದ ಕಳಪೆ ಪುಸ್ತಕವನ್ನು ಸಗಟು ಖರೀದಿಗಾಗಿಯೇ ಪ್ರಕಟಿಸಿ ಸಾರ್ವಜನಿಕ ಇಲಾಖೆಗೆ ಸೇರಿಸಿ ಹಣ ಪಡೆದಿದ್ದಲ್ಲದೆ ಅದನ್ನು ಡಿಜಿಟೈಸ್ ಮಾಡಲು ಒಪ್ಪಿಗೆ ನೀಡಿ ಲೇಖಕನೊಬ್ಬ ಸಾವಿರಾರು ಬಾರಿ ಇಂಟರ್‌ನೆಟ್‌ನಲ್ಲಿ ತನ್ನ ಪುಸ್ತಕವನ್ನೇ ಕ್ಲಿಕ್ಕಿಸಿದರೆ ರಾಯಧನ ರೂಪದಲ್ಲಿ ಮತ್ತಷ್ಟು ಹಣ ಪಡೆಯಬಹುದಾಗಿದೆ.

ಈಗಾಗಲೆ ಡಿಜಿಟೈಸ್ ಮಾಡಲು ಶೇ. 85ರಷ್ಟು ಲೇಖಕರ ಒಪ್ಪಿಗೆ ಪಡೆದಿರುವುದಾಗಿ ಘೋಷಿಸಲಾಗಿದೆ. ಜನಪ್ರಿಯ 80/20 ನಿಯಮದಂತೆ ಸಾಮಾನ್ಯವಾಗಿ ಶೇ. 80 ರಷ್ಟು ಲೇಖನ/ ಪುಸ್ತಕಗಳನ್ನು ಶೇ. 20ರಷ್ಟು ಲೇಖಕರೂ ಮತ್ತು ಉಳಿದ ಶೇ. 20 ರಷ್ಟು ಲೇಖನ/ ಪುಸ್ತಕಗಳನ್ನು ಶೇ. 80ರಷ್ಟು ಲೇಖಕರು ಬರೆದಿರುತ್ತಾರೆ. ಆದ್ದರಿಂದ ಡಿಜಿಟೈಸ್ ಮಾಡಲು ಈಗಾಗಲೇ ಒಪ್ಪಿಗೆ ನೀಡಿದ ಲೇಖಕರಾರಿರಬಹುದೆಂಬುದನ್ನು ಊಹಿಸಬಹುದು. ಅನುಮತಿ ನೀಡಲಿಲ್ಲ ಎಂಬ ಕಾರಣಕ್ಕಾಗಿ ಪ್ರಸಿದ್ಧ ಲೇಖಕರ ಕೃತಿಗಳು ಈ ಯೋಜನೆಯ ಹೊರಗುಳಿಯುವುದರಿಂದ ಜಗತ್ತಿಗೆ ಕನ್ನಡ ಸಾರಸ್ವತ ಲೋಕದ ಪ್ರತಿನಿಧಿಯಾಗಿ ಇಂಟರ್‌ನೆಟ್‌ನಲ್ಲಿ ದೊರೆಯುವ ಕನ್ನಡ ಪುಸ್ತಕಗಳ ಗುಣಮಟ್ಟವೇನು ಎಂದು ಯೋಚಿಸಬೇಕಿದೆ. ಸದ್ಯಕ್ಕೆ ಇಂಟರ್‌ನೆಟ್‌ನಲ್ಲಿ ಡಿಜಿಟಲ್ ಲೈಬ್ರರಿ ಆಫ್ ಇಂಡಿಯಾದಲ್ಲಿ ಅಳವಡಿಸಿರುವ 600 ಕನ್ನಡ ಪುಸ್ತಕಗಳನ್ನು ಪರಿಶೀಲಿಸಿದರೆ ಇದು ಸ್ಪಷ್ಟ. ಗುಣಾತ್ಮಕ ಕೃತಿಗಳು ಡಿಜಿಟಲ್ ಗ್ರಂಥಾಲಯದಲ್ಲಿ ದೊರೆಯುವ ಲಕ್ಷಣಗಳಿಲ್ಲವಾದರೂ ಸಗಟು ಖರೀದಿಗಾಗಿಯೇ ಪ್ರಕಟಿಸುವವರಿಗೆ ಡಿಜಿಟೈಸಿಂಗ್ ಯೋಜನೆಯ ರಾಯಧನ ಒಂದು ಬೋನಸ್.

ಹತ್ತಾರು ವರ್ಷಗಳಿಂದ ಪುಸ್ತಕಗಳ ಸಗಟು ಖರೀದಿ ಒಂದು ಸಬ್ಸಿಡಿ ವ್ಯವಸ್ಥೆಯಾಗಿ ಮೂಲ ಸೌಲಭ್ಯ ಮತ್ತು ಮಾರಾಟ ಜಾಲದ ಬೆಂಬಲವಿಲ್ಲದ ಲೇಖಕ- ಪ್ರಕಾಶಕರ ಹಿಂಡನ್ನು ಸೃಷ್ಟಿಸಿದೆ. ಇದರಿಂದಾಗಿ ಕನ್ನಡ ಪುಸ್ತಕಗಳು ದೇಶದಲ್ಲಿ ಪ್ರಕಟವಾಗುವ ಒಟ್ಟು ಪುಸ್ತಕಗಳ ಕೇವಲ ಶೇ. 2.6 ರಷ್ಟಿದ್ದರೂ ದೇಶದ ಶೇ. 10ರಷ್ಟು ಪ್ರಕಾಶಕರು ಕರ್ನಾಟಕದಲ್ಲೇ ಇದ್ದಾರೆ.

ಕನ್ನಡದಲ್ಲಿ ಇದುವರೆವಿಗೆ ಪ್ರಕಟಿಸಿರಬಹುದಾದ ಒಂದು ಲಕ್ಷ ಪುಸ್ತಕಗಳನ್ನೆಲ್ಲಾ ಡಿಜಿಟೈಸ್ ಮಾಡಲಿರುವಾಗ ಆಯ್ಕೆ ಸಮಿತಿ ಮಾಡುವುದೇನು? ಇಷ್ಟಾಗಿಯೂ ಕನ್ನಡದ ಒಂದು ಲಕ್ಷ ಪುಸ್ತಕಗಳ ಪಟ್ಟಿಯಾಗಲಿ, ಸೂಚಿಯಾಗಲಿ, ಸಮಗ್ರ ಗ್ರಂಥ ಸಂಗ್ರಹವಾಗಲಿ ಎಲ್ಲಿಯೂ ಇಲ್ಲ.

ಇತರ ಭಾರತೀಯ ಭಾಷೆಗಳಂತೆ ಕನ್ನಡ ಪುಸ್ತಕಗಳ ವಿವರಗಳನ್ನು 'ವಿಶ್ವ ಗ್ರಂಥಸೂಚಿ'ಯಲ್ಲಾಗಲಿ, ವಿಶ್ವದ 18,000 ಗ್ರಂಥಸೂಚಿಗಳ ಸಮೂಹವಾದ Libdex ಇಂಟರ್‌ನೆಟ್ ತಾಣದಲ್ಲಾಗಲಿ ಸೇರಿಸಿಲ್ಲ. ಗ್ರಂಥಾಲಯ ಇಲಾಖೆಯ ಇಂಟರ್‌ನೆಟ್ ತಾಣದಲ್ಲೂ ಪುಸ್ತಕಗಳ ವಿವರಗಳಿಲ್ಲ.

ಡಿಜೀಟೈಸ್ ಯೋಜನೆ ಪರೋಕ್ಷವಾಗಿ ದುಬಾರಿ. ಒಂದು ಲಕ್ಷ ಪುಸ್ತಕಗಳನ್ನು ಒಟ್ಟಿಗೆ ಡಿಜಿಟೈಸ್ ಮಾಡುವುದಕ್ಕೆ ಬದಲು, ಪ್ರತೀ ವರ್ಷ ಪ್ರಕಟವಾಗುವ 1500 ಹೊಸ ಕನ್ನಡ ಪುಸ್ತಕಗಳನ್ನು ಮುದ್ರಣಕ್ಕೆ ತಯಾರಾಗುವ ಮೂಲದಲ್ಲೆ, ಅಂದರೆ ಡಿಟಿಪಿ/ ಕಂಪ್ಯೂಟರ್‌ನಲ್ಲಿರುವಾಗಲೇ, ಪಠ್ಯ ರೂಪದಲ್ಲಿ ಸಂಗ್ರಹಿಸಿ, ಸೂಕ್ತ multimedia (ದೃಶ್ಯ-ಶ್ರವಣ) ಅಳವಡಿಕೆಯಿಂದ ಮೌಲ್ಯವರ್ಧಿಸಿ ನಿಜವಾದ ಇ-ಪುಸ್ತಕ ಸಂಗ್ರಹಣೆ ಮಾಡಿದರೆ ನಾಲ್ಕಾರು ವರ್ಷಗಳಲ್ಲಿ ಒಂದು ಸಮಕಾಲೀನ ಅರ್ಥಪೂರ್ಣ ಸಂಗ್ರಹವಾಗುತ್ತದೆ.

ಹಲವಾರು ಕನ್ನಡ ಕೃತಿಗಳನ್ನು ನಾಟಕ, ಸಂಗೀತ, ಸಿನಿಮಾಗಳಿಗೆ ಅಳವಡಿಸಿರುವುದರಿಂದ ಅವುಗಳ ದೃಶ್ಯ-ಶ್ರವಣ ತುಣುಕುಗಳನ್ನು ಪರಿಣಾಮಕಾರಿಯಾಗಿ ಇ-ಪುಸ್ತಕದಲ್ಲಿ ಅಳವಡಿಸಬಹುದು ಮತ್ತು ದೃಶ್ಯ-ಶ್ರವಣ ಪುಸ್ತಕಗಳನ್ನೂ ಪ್ರಕಟಿಸಬಹುದು.

ಇಂತಹ ಇ-ಪುಸ್ತಕಗಳಿರುವಾಗ ಮುದ್ರಿತ ಪ್ರತಿಗಳ ಸಗಟು ಖರೀದಿ (ಸಾರ್ವಜನಿಕ ಗ್ರಂಥಾಲಯ, ಶಿಕ್ಷಣ ಇಲಾಖೆ ಮತ್ತು ಪುಸ್ತಕ ಪ್ರಾಧಿಕಾರ) ನಿಲ್ಲಿಸಿ ಸೀಮಿತ ಸಂಖ್ಯೆಯ ಪ್ರತಿಗಳನ್ನಷ್ಟೇ ಕೊಳ್ಳಬೇಕು. ಗ್ರಂಥಾಲಯಗಳಲ್ಲಿ ಸುಲಭವಾಗಿ ದೊರೆಯದಂತಹ ಅಪೂರ್ವ ಗ್ರಂಥಗಳನ್ನು ಡಿಜಿಟೈಸ್ ಮಾಡಿದರೆ ಸಂಗ್ರಹಕ್ಕೆ ಬೆಲೆ ಬರುತ್ತದೆ ಮತ್ತು ಓದುಗರು ಅನಿವಾರ್ಯವಾಗಿಯಾದರೂ ಬಳಸುವಂತಾಗುತ್ತದೆ. ಸರಳ ಡಿಜಿಟೈಸ್ ತಂತ್ರಜ್ಞಾನವನ್ನು ತಮ್ಮ ಪ್ರಕಟಣೆಗಳಿಗೆ ಸಣ್ಣಪುಟ್ಟ ಸಂಸ್ಥೆಗಳು ಮತ್ತು ಮನೆಮನೆಗಳಲ್ಲಿ ಮಕ್ಕಳು ಸುಲಭವಾಗಿ ಬಳಸುತ್ತಿರುವಾಗ ಪ್ರಕಾಶಕರಿಂದಲೇ ಡಿಜಿಟಲ್ ಪ್ರಕಟಣೆ ಸಾಧ್ಯ. ಮಾಹಿತಿ ತಂತ್ರಜ್ಞಾನ ಯುಗದ ಸಾಮಾನ್ಯ ಬೆಳವಣಿಗೆಗಳಿಗೆ ಅತಿಯಾದ ಪ್ರಚಾರ (hype) ಮತ್ತು ಖರ್ಚು ಸಲ್ಲದು. ಬದಲಾಗಿ ಕಡಿಮೆ ಖರ್ಚಿನಲ್ಲಿ ಹೆಚ್ಚಿನ ಓದುಗರನ್ನು ತಲುಪುವಂತಾಗಬೇಕು. (ಲೇಖಕರು: ಗ್ರಂಥ ಪಾಲಕರು).

## ಲೇಕಖರ ವಿವರ



ಡಾ. ಎಂ ಎಸ್ ಶ್ರೀಧರ್‌ರವರು ಗಣಿತ ಹಾಗೂ ಬಿಸಿನೆಸ್ ಮ್ಯಾನೇಜ್‌ಮೆಂಟ್ ಎರಡೂ ವಿಷಯಗಳಲ್ಲಿ ಸ್ನಾತಕೋತ್ತರ ಪದವೀಧರರಾಗಿದ್ದು, ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನದಲ್ಲಿ ಡಾಕ್ಟರೇಟ್ ಪಡೆದಿದ್ದಾರೆ. ಅವರು ಕಳೆದ ೩೫ ವರ್ಷಗಳಿಂದ ಗ್ರಂಥಾಲಯ ಕ್ಷೇತ್ರದಲ್ಲಿದ್ದು, 1978 ರಿಂದ ಇಸ್ರೋ ಉಪಗ್ರಹ ಕೇಂದ್ರದ ಗ್ರಂಥಾಲಯ ಮತ್ತು ಪ್ರಲೇಖನ ವಿಭಾಗದ ಮುಖ್ಯಸ್ಥರಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಇದಕ್ಕೂ ಮುನ್ನ ಎನ್ ಎ ಎಲ್, ಐ ಐ ಎಂ (ಬೆಂಗಳೂರು) ಹಾಗೂ ಮೈಸೂರು ವಿಶ್ವ ವಿದ್ಯಾಲಯಗಳ ಗ್ರಂಥಾಲಯಗಳಲ್ಲಿ  ಕಾರ್ಯ ನಿರ್ವಹಿಸಿದ ಅನುಭವವಿದೆ.

ಡಾ. ಶ್ರೀಧರ್‌ರವರು ನಾಲ್ಕು ಪುಸ್ತಕಗಳು ಹಾಗೂ ೭೪ ಸಂಶೋಧನಾ ಪ್ರಬಂಧಗಳನ್ನು ಪ್ರಕಟಿಸಿದ್ದಾರೆ, ಹಾಗೂ ವಿವಿಧ ಪುಸ್ತಕಗಳಿಗಾಗಿ ೫ ಪಠ್ಯಗಳನ್ನೂ ಬರೆದಿದ್ದಾರೆ. ಮುಕ್ತ ವಿಶ್ವವಿದ್ಯಾನಿಲಯದ ಗ್ರಂಥಾಲಯ ವಿಜ್ಞಾನ ಪದವಿ ಹಾಗೂ ಸ್ನಾತಕೋತ್ತರ ವಿದ್ಯಾರ್ಥಿಗಳಿಗಾಗಿ ಪಠ್ಯ ಸಾಮಾಗ್ರಿಯನ್ನು ರಚಿಸಿದ್ದು, ಇದಲ್ಲದೆ ಸುಮಾರು ೨೨ ಲೇಖನಗಳನ್ನು ವಿವಿಧ ಸಮ್ಮೇಳನಗಳಲ್ಲಿ ಮಂಡಿಸಿದ್ದಾರೆ.

**E-mail:** sridharmirle@yahoo.com, mirlesridhar@gmail.com, sridhar@isac.gov.in **;**
**Phone:** 91-80-25084451;  **Fax:** 91-80-25084475.